ಅನುಬಂಧ

ಕರ್ನಾಟಕ ರಾಜ್ಯದಲ್ಲಿ ಈಗ ವಿವಿಧ ಮೂಲಗಳಿಂದ ದಿನವಹಿ ದೊರೆಯುತ್ತಿರುವ ವಿದ್ಯುತ್ತಿನ ಪ್ರಮಾಣದ ವಿವರ.

ಕ್ರಮ ಸಂಖ್ಯೆ	ವಿವರ	ವಿದ್ಯುತ್ತಿನ ಪ್ರಮಾಣ (ದಶಲಕ್ಷ ಯೂನಿಟ್ಟುಗಳಲ್ಲಿ)
೧	೨	೩
೧	ರಾಜ್ಯದಲ್ಲಿನ ಆಂತರಿಕ ವಿದ್ಯುತ್ ಉತ್ಪಾದನೆಯಿಂದ:	
	ಅ) ಜಲವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ	೧೫.೩೩
	ಆ) ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಿಂದ	೬.೦೦
೨	ಮಹಾರಾಷ್ಟ್ರದಿಂದ	೪.೦೦
೩	ಕೇಂದ್ರ ಸರ್ಕಾರದ ಯೋಜನೆಗಳಿಂದ	೫.೦೦
	ಒಟ್ಟು	೩೦.೩೩

ಅರಣ್ಯಗಳಲ್ಲಿರುವ ಮೃಗಚರಗಳ ಸಂಖ್ಯೆ ಕುರಿತು

೧೬೭೮. ಶ್ರೀ ಪಿ. ಎಂ. ಚಿಕ್ಕ ಬೋರಯ್ಯ (ಚಾಮರಾಜ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಈಗ ಎಷ್ಟು ಅಭಯಾರಣ್ಯಗಳು ಇವೆ ಅವು ಎಲ್ಲೆಲ್ಲಿ ಇವೆ ?

ಆ) ಅವುಗಳಲ್ಲಿರುವ ಮೃಗಚರಗಳ ಸಂಖ್ಯೆ ಹಾಗೂ ಅರಣ್ಯಗಳ ವಿಸ್ತೀರ್ಣವೆಷ್ಟು ?

ಇ) ವನಸಿರಿ ಹೆಚ್ಚಿಸಲು ಕೈಗೊಳ್ಳಲು ಹವಣಿಸಿರುವ ವಿಶೇಷ ಯೋಜನೆಗಳಾವುವು ?

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿ ಒಟ್ಟು ೧೮ ಅಭಯಾರಣ್ಯ ಮತ್ತು ಐದು ರಾಷ್ಟ್ರೀಯ ಉದ್ಯಾನವನಗಳಿದ್ದು ಅವು ಮೈಸೂರು, ಬೆಂಗಳೂರು, ದಕ್ಷಿಣ ಕನ್ನಡ ಉತ್ತರ ಕನ್ನಡ, ಶಿವಮೊಗ್ಗ, ಮಡಿಕೇರಿ, ಧಾರವಾಡ ಬೆಳಗಾಂ ಜಿಲ್ಲೆಗಳಲ್ಲಿವೆ.

ವಿಸ್ತೀರ್ಣ ಈ ಕೆಳಗಿನಂತಿವೆ.

೧	ರಾಷ್ಟ್ರೀಯ ಉದ್ಯಾನವನ	ಜಿಲ್ಲೆ	ಚ.ಕಿ.ಮೀ.
	ಅ) ಅನ್ಶಿ	ಉತ್ತರ ಕನ್ನಡ ಜಿಲ್ಲೆ	೨೫೦.೦೦
	ಆ) ಬಂಡೀಪುರ	ಮೈಸೂರು	೮೭೪.೨೦
	ಇ) ಬನ್ನೇರುಘಟ್ಟ	ಬೆಂಗಳೂರು	೧೦೪.೨೭
	ಈ) ಕುದುರೆಮುಖ	ದಕ್ಷಿಣ ಕನ್ನಡ ಚಿಕ್ಕಮಗಳೂರು	೬೦೦.೩೨
	ಉ) ನಾಗರಹೊಳೆ	ಮೈಸೂರು ಮತ್ತು ಮಡಿಕೇರಿ.	೫೭೧.೫೫

೨ ಅಭಯಾರಣ್ಯ

ಅ)	ಆದಿಚುಂಚನಗಿರಿ	ಮಂಡ್ಯ	೦.೮೪
ಆ)	ಅರಭಿ ಕಿಟ್ಟಿ	ಮೈಸೂರು	೧೩.೫೦
ಇ)	ಭದ್ರಾ	ಶಿವಮೊಗ್ಗ ಚಿಕ್ಕಮಗಳೂರು	೪೯೨.೪೬
ಈ)	ಬಿ.ಆರ್.ಟಿ.	ಮೈಸೂರು	೫೩೯.೫೨
ಉ)	ಬ್ರಹ್ಮಗಿರಿ	ಮಡಿಕೇರಿ	೧೮೧.೨೯
ಊ)	ಕಾವೇರಿ	ಬೆಂಗಳೂರು	೫೨೦.೫೧
ಋ)	ದಾಂಡೇಲಿ	ಧಾರವಾಡ	೮೩೪.೧೬
ೠ)	ಮೇಲುಕೋಟೆ	ಮಂಡ್ಯ	೪೯.೮೨
ಎ)	ಮೂಕಾಂಬಿಕ	ದಕ್ಷಿಣ ಕನ್ನಡ	೨೪೭.೦೦
ಏ)	ನುಗು	ಮೈಸೂರು	೩೦.೩೨
ಐ)	ಪುಷ್ಪಗಿರಿ	ಮಡಿಕೇರಿ	೧೦೨.೯೬
ಒ)	ರಾಣೆಬೆನ್ನೂರು	ಧಾರವಾಡ	೧೧೯.೦೦
ಓ)	ರಂಗನತಿಟ್ಟು	ಮಂಡ್ಯ	೦.೬೭
ಔ)	ಶರಾವತಿ ಕಣಿವೆ	ಶಿವಮೊಗ್ಗ	೪೩೧.೨೩
ಅಂ)	ಶೆಟ್ಟಿಹಳ್ಳಿ	ಶಿವಮೊಗ್ಗ	೩೯೫.೬೦
ಆಃ)	ಸೋಮೇಶ್ವರ	ದಕ್ಷಿಣ ಕನ್ನಡ	೮೮.೪೦
ಕ)	ಘಟಪ್ರಭ	ಬೆಳಗಾಂ	೨೯.೭೮
ಖ)	ತಲಕಾವೇರಿ	ಮಡಿಕೇರಿ	೧೦೫.೦೦

ಅ) ಅಭಯಾರಣ್ಯವಾರು ವನ್ಯ ಪ್ರಾಣಿಗಳ ಸಂಖ್ಯೆ ಲಭ್ಯವಿಲ್ಲ. ಆದರೆ ಹುಲಿ, ಚಿರತೆ, ಗಣತಿಯನ್ನು ೧೯೮೪ ರಲ್ಲಿ ಆನೆ ಹಾಗೂ ಕಾಡೆಮ್ಮೆ ಗಣತಿಯನ್ನು ೧೯೮೫ ರಲ್ಲಿ ಇತರೆ ಪ್ರಾಣಿ ಪಕ್ಷಿಗಳ ಗಣತಿಯನ್ನು ೧೯೮೭ ರಲ್ಲಿ ನಡೆಸಲಾಗಿರುತ್ತೆ. ರಾಜ್ಯದಲ್ಲಿರುವ ವನ್ಯಪ್ರಾಣಿಗಳ ವಿವರಗಳು ಈ ಕೆಳಕಂಡಂತಿವೆ.

ಆನೆಗಳು	...	೩,೫೭೯
ಹುಲಿಗಳು	...	೨೦೨
ಚಿರತೆ ಜಾತಿ	...	೨೨೮
ಕರಡಿ ಜಾತಿ ಪ್ರಾಣಿ	...	೩೧೨
ಕಾಡೆಮ್ಮೆ	...	೫,೩೧೬
ಬ್ಲಾಕ್‌ಬಕ್	...	೪,೦೦೦
ಪ್ರಾಣಿಗಳು	...	೭,೯೧,೨೦೪
ಜಲಚರಗಳು (ಅಕ್ವಾಟಿಕ್)	...	೩೧೫
ಉಗರ (ರೆಪ್ಟೈಲ್)	...	೫,೭೦೯
ಪಕ್ಷಿಗಳು	...	೩,೦೪,೨೯೯

ಇನ್ನೂ ಹಲವಾರು ಜಾತಿಯ ಎಣಿಕೆ ಮಾಡಲಾಗದಷ್ಟು ಪಕ್ಷಿಗಳು ಇರುತ್ತವೆ.

೫)೧ ಬೇಸಿಗೆ ಕಾಲದಲ್ಲಿ ವನ್ಯಪ್ರಾಣಿಗಳಿಗೆ ಕುಡಿಯಲು ನೀರಿಲ್ಲದೆ ವಲಸೆ ಹೋಗುವುದನ್ನು ತಪ್ಪಿಸಲು ಸೂಕ್ತ ಸ್ಥಳಗಳಲ್ಲಿ ನೀರನ್ನು ಶೇಖರಣೆ ಮಾಡಿ ಉಳಿಸಲು ಕೆರೆ ಕಟ್ಟೆಗಳನ್ನು ಅಭಿವೃದ್ಧಿಪಡಿಸಿರುವುದಲ್ಲದೆ, ಹೊಸದಾಗಿ ನಿರ್ಮಿಸಲಾಗಿದೆ.

೨ ಬೇಸಿಗೆ ಕಾಲದಲ್ಲಿ ಕಾಡುಕಿಚ್ಚು ಬೀಳದಂತೆ ತಡೆಯಲು ಸರಹದ್ದಿನ ಹಾಗೂ ಒಳಭಾಗದ ಹಲವಾರು ಬೆಂಕಿ ಲೈನುಗಳನ್ನು ಸ್ವಚ್ಚ ಮಾಡಿ ಧಾಮದ ವನ್ಯ ಪ್ರದೇಶವನ್ನು ಕಾಡು ಕಿಚ್ಚಿನಿಂದ ರಕ್ಷಿಸಲಾಗಿದೆ.

೩ ಧಾಮದಲ್ಲಿರುವ ಕಾಡು ರಸ್ತೆಗಳನ್ನು ದುರಸ್ತಿಪಡಿಸಿ ಕಾಡಿನ ರಕ್ಷಣೆ ಹಾಗೂ ವೀಕ್ಷಣೆಗೆ ಉಪಯುಕ್ತವಾಗುವಂತೆ ಮಾಡಲಾಗಿದೆ.

೪ ಸೂಕ್ತ ಪ್ರದೇಶಗಳಲ್ಲಿ ವೀಕ್ಷಣಾ ಗೋಪುರಗಳನ್ನು ನಿರ್ಮಿಸಿ ಕಾಡುಕಿಚ್ಚು ಹಾಗೂ ಅಕ್ರಮ ಬೇಟೆಯನ್ನು ತಡೆಯಲು ಸೂಕ್ತವಾಗುವಂತೆ ಮಾಡಲಾಗಿದೆ.

೫ ವನ್ಯ ಜೀವಿಗಳು ವಲಸೆ ಹೋಗದಂತೆ ವನ್ಯಧಾಮದಲ್ಲಿ ಸೂಕ್ತವಾದ ಪ್ರದೇಶಗಳಲ್ಲಿ ಉಪ್ಪಿನ ಗುಂಡಿಗಳನ್ನು ನಿರ್ಮಿಸಲಾಗಿದೆ.

೬ ರಾಷ್ಟ್ರೀಯ ಉದ್ಯಾನವನಗಳಲ್ಲಿ ಮತ್ತು ಧಾಮಗಳಲ್ಲಿ ಹಣ್ಣು ವಂತು ನೆರಳಿನ ಮರ ಗಳನ್ನು ಬೆಳೆಸಲು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

೭ ವನಸಿರಿ ಹೆಚ್ಚಿಸಲು ಈ ಕೆಳಗಿನ ಯೋಜನೆಗಳು ಪ್ರಮುಖ ಯೋಜನೆಗಳಾಗಿವೆ.

ಅ) ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ.

ಆ) ವಿಶ್ವಬ್ಯಾಂಕ್ ನೆರವಿನ ಸಾಮಾಜಿಕ ಅರಣ್ಯ ಯೋಜನೆ.

ಇ) ಅರಣ್ಯ ಅಭಿವೃದ್ಧಿ ನಿಧಿ.

ಈ) ಕೇಂದ್ರ ಪುರಸ್ಕೃತ ಗ್ರಾಮೀಣ ಉರುವಲು ಬೆಳೆಸುವ ಯೋಜನೆ.

ಉ) ಭೂಸಾರ ಸಂರಕ್ಷಣೆ (ವನ ನಿರ್ಮಾಣ)

ಊ) ಕೇಂದ್ರ ಪುರಸ್ಕೃತ ನದಿ ಕಣಿವೆ ಪ್ರದೇಶಗಳಲ್ಲಿ ವನ ನಿರ್ಮಾಣ

ಋ) ವಿಶೇಷ ಘಟಕ ಯೋಜನೆ.

ೠ) ಗಿರಿಜನರ ಉಪಯೋಜನೆ.

ಎ) ಗ್ರಾಮೀಣ ಭೂರಹಿತ ಉದ್ಯೋಗ ಭರವಸೆ ಯೋಜನೆ.

ಏ) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ.

ಐ) ಬರಗಾಲ ಪೀಡಿತ ಪ್ರದೇಶ ಅಭಿವೃದ್ಧಿ ಯೋಜನೆ.

ಒ) ಒಣ ಭೂಮಿ ಅಭಿವೃದ್ಧಿ ಯೋಜನೆ.

ಹಾಲಿನ ಒಕ್ಕೂಟಗಳಲ್ಲಿನ ಪಶುವೈದ್ಯ ಸೇವೆ ಬಗ್ಗೆ

೧೬೮೫. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) —ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಹಾಗೂ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲಾ ಒಕ್ಕೂಟ ಮತ್ತು ಕೆ. ಎಂ. ಎಫ್. ಘಟಕಗಳಲ್ಲಿ ಪಶುವೈದ್ಯರ ವಾರದ ಭೇಟಿ ಕಾರ್ಯ ನಡೆಯುತ್ತಿದೆಯೇ ?

ಆ) ಒಕ್ಕೂಟಗಳಲ್ಲಿ ಪಶುವೈದ್ಯರ ವಾರದ ಭೇಟಿ, ತುರ್ತು ಭೇಟಿ ಸೇವೆಗಳಿಗೆ ಪಶುವೈದ್ಯರ ಸಂಬಳ, ವಾಹನ ಬಾಡಿಗೆ ಔಷಧಿಗಳ ಖರ್ಚು ಒಟ್ಟುಗೂಡಿಸಿ ಅವರಿಂದ ಶುಶ್ರೂಷೆ ಮಾಡಲ್ಪಟ್ಟ ರಾಸುಗಳಿಗೆ ಲೆಕ್ಕಚಾರ ಮಾಡಿದಾಗ ಒಂದು ರಾಸುವಿಗೆ ತಗಲುವ ವೆಚ್ಚವೆಷ್ಟು ?